---

10.ಯಾವುದಾದರೂ 4 ಸಮಮಿತಿ ಅಕ್ಷರಗಳನ್ನು ಬರೆ?

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ ಸಕಲೇಶಪುರ

ವಿಷಯ-ಕನ್ನಡ ಪ್ರಥಮ ಭಾಷೆ ತರಗತಿ -4

## 5 ನೇ ತರಗತಿ ಸೇತುಬಂಧಕ್ಕೆ ಬುನಾದಿ ಸಾಮರ್ಥ್ಯಗಳು

======================================================

ಶಾಲೆಯ ಹೆಸರು:-

-----------------------------------------------------------------------------------------------------------

1.ಮಕ್ಕಳು ಕೊಟ್ಟಿರುವ ವಿಷಯಗಳ ಬಗ್ಗೆ ನಿರರ್ಗಳವಾಗಿ ಸಹಜವಾಗಿ ಮಾತನಾಡುವರು .

2.ವರ್ಣಮಾಲೆ ಗುಣಿತಾಕ್ಷರಗಳು ,ಒತ್ತಕ್ಷರಗಳು ಅಂಶಗಳನ್ನು ಪೂರ್ಣವಾಗಿ ಗ್ರಹಿಸಿ ಸ್ಪಷ್ಟ

ಉದಾಹರಣೆಯೊಂದಿಗೆ ಪದರಚನೆ ಮಾಡುವರು ಮತ್ತು ಸರಳ ವಾಕ್ಯಗಳನ್ನು ರಚಿಸುವರು..

3. ಸರಳವಾದ ವಿಷಯಗಳನ್ನು ಅರ್ಥಮಾಡಿಕೊಂಡು ಸರಳ ಪ್ರಶ್ನೆಗಳಿಗೆ ಉತ್ತರಿಸುವರು.

4. ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ವಾಕ್ಯಗಳನ್ನು ಬರೆಯುವರು.

5. ಶಿಕ್ಷಕರ ಸಹಾಯದಿಂದ ಚಿಕ್ಕ ಪ್ರಬಂಧಗಳು ಹಾಗೂ ಪತ್ರ ಲೇಖನ ವನ್ನು ರಚಿಸುವರು.

6. ಲಿಂಗ ,ವಚನ ,ಕಾಲ, ವಿರುದ್ಧಾರ್ಥಕ ಪದಗಳು ,ಈ ಅಂಶಗಳನ್ನು ಸ್ಪಷ್ಟವಾಗಿ ಗ್ರಹಿಸಿ

ಪ್ರಾಯೋಗಿಕವಾಗಿ ಬಳಸುವರು.

7. ಆಡುಭಾಷೆಯಿಂದ ಗ್ರಾಂಥಿಕ ಭಾಷೆಗೆ ಪರಿವರ್ತಿಸುವರು.

8. ಪ್ರಾಸ ಪದಗಳನ್ನು ಗುರುತಿಸಿ ಬರೆಯುವರು.

9. ಪದಗಳನ್ನು ಜೋಡಿಸಿ ವಾಕ್ಯ ರಚನೆ ಮಾಡುವರು.

10.ಅಚ್ಚುಕಟ್ಟಾಗಿ ಮತ್ತು ಸ್ಪುಟವಾಗಿ ಬರೆಯುವ ಸಾಮರ್ಥ್ಯವನ್ನು ರೂಡಿಸಿಕೊಳ್ಳುವರು.

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ ಸಕಲೇಶಪುರ

**ವಿಷಯ- ಕನ್ನಡ** **ತರಗತಿ -4**

## 5 ನೇ ತರಗತಿ ಸೇತುಬಂಧಕ್ಕೆ ಪೂರ್ವ ಪರೀಕ್ಷೆ

**ಶಾಲೆಯ ಹೆಸರು:-** **ವಿದ್ಯಾರ್ಥಿ ಹೆಸರು:-**

---

**1.ನನ್ನ ಊರು ,ನನ್ನ ಶಾಲೆ ,ಅಮ್ಮ ಮಳೆ ಇವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ತೆಗೆದುಕೊಂಡು ಮೂರು ನಾಲ್ಕು ವಾಕ್ಯಗಳಲ್ಲಿ ನಿನ್ನ ಗೆಳೆಯರೊಂದಿಗೆ ಹಂಚಿಕೊಳ್ಳಿ.**

**2.ಈ ಕೆಳಗೆ ಕೊಟ್ಟಿರುವ ಪದಗಳನ್ನು ಓದಿಕೊಂಡು ಸಜಾತಿ ಹಾಗೂ ವಿಜಾತಿ ಒತ್ತಕ್ಷರಗಳಾಗಿ ವರ್ಗೀಕರಿಸಿ ಬರೆಯಿರಿ.**
**ಅಮ್ಮ ,ನಿತ್ಯ, ಅಜ್ಜ, ಅವ್ವ, ಶಿಕ್ಷಕ ,ರಾತ್ರಿ**

**3.<u>ಮುದ್ರಿತ ವಿಷಯ</u> :- ಮಲೆನಾಡ ತಪ್ಪಲಿನಲ್ಲಿರುವ ಕಣಬೂರು ಊರಿನ ಶಾಲೆಯ ಮಕ್ಕಳು .ಕಿಶೋರರ ಅಜ್ಜಿಯ ತೋಟಕ್ಕೆ ಗುರುಗಳೊಂದಿಗೆ ಹೊರಸಂಚಾರ ಹೊರಟರು. ಕಿಶೋರರ ಅಜ್ಜಿಯ ಮನೆ ಬೆಟ್ಟದ ತಪ್ಪಲಿನಲ್ಲಿದೆ.**
**ಮೇಲ್ಕಂಡ ಮುದ್ರಿತ ವಿಷಯವನ್ನು ಓದಿಕೊಂಡು ಪ್ರಶ್ನೆಗೆ ಉತ್ತರಿಸು**
**ಕಿಶೋರ ನಾ ಅಜ್ಜಿಯ ಮನೆಯಲ್ಲಿದೆ?**

**4.ಸೂಕ್ತವಾದ ಲೇಖನ ಚಿಹ್ನೆಯನ್ನು ಬಳಸಿ ಬರೆಯಿರಿ**
**ನಿನ್ನ ಊರು ಯಾವುದು**

**5. <u>ತೆಂಗಿನ ಮರ</u> :- ಈ ವಿಷಯಕ್ಕೆ ಸಂಬಂಧಿಸಿದಂತೆ ಕನಿಷ್ಠ ನಾಲ್ಕು ಐದು ವಾಕ್ಯಗಳಲ್ಲಿ ಪುಟ್ಟ ಪ್ರಬಂಧ ಬರೆಯಿರಿ.**

**6.ವಿರುದ್ದಾರ್ಥಕ ಪದ ಬರೆಯಿರಿ :- ಗೌರವ**

**7.ಬರ್ತಾನೆ _ ಈ ಆಡುಮಾತಿನ ಪದಗಳನ್ನು ಗ್ರಾಂಥಿಕ ಭಾಷೆಗೆ ಪರಿವರ್ತಿಸಿ ಬರೆಯಿರಿ.**

**8.ದಮ್ಮಯ್ಯ ಕಂದಯ್ಯ ,ಬೇಡುವೆನು ನಿನ್ನ.**
**ಕನ್ನಡಮ್ಮನ ಹರಕೆ ಮರೆಯದಿರು ಚಿನ್ನ.**
**ಪದ್ಯಭಾಗವನ್ನು ಓದಿಕೊಂಡು ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ**

**9.ಮುಖ ವಿದ್ಯಾಸಾಗರನ ಅರಳಿತು**
**ಮೇಲ್ಕಂಡ ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ವಾಕ್ಯ ರಚಿಸಿ**

**10.ಈ ಕೆಳಕಂಡ ಪದಗಳನ್ನು ದುಂಡಾಗಿ ನಕಲು ಮಾಡು**

ರಾಮಕೃಷ್ಣ ಪಲಾಯನ

---

---

## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ ಸಕಲೇಶಪುರ

**ವಿಷಯ- ಕನ್ನಡ** **ತರಗತಿ -4**

## 5 ನೇ ತರಗತಿ ಸೇತುಬಂಧಕ್ಕೆ ಸಾಫಲ್ಯ ಪರೀಕ್ಷೆ

ಶಾಲೆಯ ಹೆಸರು:- ವಿದ್ಯಾರ್ಥಿ ಹೆಸರು:-

---

1.ಸಂಪಂಗಪ್ಪನ ಮಗ ಮರಿ ಸಂಪಂಗಪ್ಪ

ಕೆಂಪು ಕುಂಕುಮ ಕಪ್ಪು ಕುಂಕುಮ

ಈ ಮೇಲಿನ ನಾಲಿಗೆ ಸುರುಳಿ ವಾಕ್ಯಗಳನ್ನು ವೇಗವಾಗಿ ತಪ್ಪಿಲ್ಲದಂತೆ ಹತ್ತು ಬಾರಿ ಹೇಳು.

2.ರೂ ಗುಣಿತಾಕ್ಷರದಿಂದ ಪ್ರಾರಂಭವಾಗುವ ಅಥವಾ ಇರುವ ಯಾವುದಾದರೂ ಎರಡು ಪದಗಳನ್ನು ಬರೆ.

3.ಬಿಸಿಲ ಜಳಕೆ ನೀರು ಏನಾಯಿತು?

4.ನಿನಗೆ ತಿಳಿದಿರುವ ಯಾವುದಾದರೂ ಎರಡು ಲೇಖನ ಚಿಹ್ನೆಗಳನ್ನು ಬರೆಯಿರಿ?

5.ನಿನಗಿಷ್ಟವಾದ ಸಾಕುಪ್ರಾಣಿಯ ಬಗ್ಗೆ ಪುಟ್ಟ ಪ್ರಬಂಧ ಬರೆ?

6.ಬಹುವಚನ ರೂಪ ಬರೆಯಿರಿ . ಮಗು , ನಾಯಿ

7.ಅತ್ತಿರ - ಈ ಪದವನ್ನು ಗ್ರಾಂಥಿಕ ಭಾಷೆಗೆ ಪರಿವರ್ತಿಸಿ ಬರೆಯಿರಿ.

8.ಗೋಪಿಯು ನನ್ನ ನಲುಮೆಯ ಮಿತ್ರ

ದಿನವೂ ಬಿಡಿಸುವ ಸುಂದರ ಚಿತ್ರ

ಸರಾಗ ಅರಿವುದು ಕುಂಚದ ಓಟ

ವಿಧವಿಧ ಬಣ್ಣದ ಓಕುಳಿಯಾಟ

ಈ ಮೇಲ್ಕಂಡ ಪದ್ಯಭಾಗವನ್ನು ಓದಿಕೊಂಡು ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

9.ನನಗೆ ಎಂದರೆ ಆಟ ಇಷ್ಟ ತುಂಬಾ.

ಈ ಮೇಲ್ಕಂಡ ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬರೆಯಿರಿ.

10.ಈ ವಾಕ್ಯವನ್ನು ದುಂಡಾಗಿ ನಕಲು ಮಾಡಿರಿ .